# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020–21ನೇ ಸಾಲಿನ ಕೇಂದ್ರ ಪುರಸ್ಕೃತ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD) ಯೋಜನೆಯಡಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: AGRI-AML–91/2020, ದಿನಾಂಕ: 02.06.2020 ಮತ್ತು ಸೇರ್ಪಡೆ ಆದೇಶ ದಿನಾಂಕ:16.06.2020.

2. ಸರ್ಕಾರದ ಆದೇಶ ಸಮ ಸಂಖ್ಯೆಯ ದಿನಾಂಕ: AGRI-AMS/37/2020, ದಿನಾಂಕ:16.07.2020, 27.08.2020, 08.10.2020 ಮತ್ತು 25.01.2021.

3. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಉಕೃನಿ/ರನಿಪ್ರ/NMSA-RAD/ಅ.ಬಿ/2020–21, ದಿನಾಂಕ: 14.12.2020.

*****

**ಪ್ರಸ್ತಾವನೆ:**

2020–21ನೇ ಸಾಲಿನ ಆಯವ್ಯಯ ಸಂಪುಟ–3 ರಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ(RAD) ಯೋಜನೆಗಾಗಿ ಲೆಕ್ಕ ಶೀರ್ಷಿಕೆ: 2401–00–108–1–16 ರಡಿ ಒಟ್ಟು ರೂ.1667.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶ ಮತ್ತು ಸೇರ್ಪಡೆ ಆದೇಶದಲ್ಲಿ ಕೇಂದ್ರ ಪುರಸ್ಕೃತ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ(RAD) ಯೋಜನೆಯನ್ನು 2020–21ನೇ ಸಾಲಿಗೆ ಮುಂದುವರೆಸುತ್ತಾ, ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶಗಳಲ್ಲಿ, 2020–21ನೇ ಸಾಲಿನ ಕೇಂದ್ರ ಪುರಸ್ಕೃತ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ(RAD) ಯೋಜನೆಯ ಅನುಷ್ಠಾನಕ್ಕಾಗಿ 2018–19ನೇ ಸಾಲಿನ ಮರುಮೌಲ್ವೀಕರಿಸಿದ ಅನುದಾನ, 2019–20ನೇ ಸಾಲಿನ ಮರುಮೌಲ್ವೀಕರಿಸಿದ ಅನುದಾನ ಹಾಗೂ ಮೊದಲನೇ ಕಂತಿನ ಅನುದಾನ ಸೇರಿದಂತೆ, ಒಟ್ಟು ರೂ.1219.78 ಲಕ್ಷಗಳನ್ನು ಈಗಾಗಲೇ ಲೆಕ್ಕ ಶೀರ್ಷಿಕೆ: 2401–00–108–1–16 ರಡಿ ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ, ಕೇಂದ್ರ ಪುರಸ್ಕೃತ ಯೋಜನೆ– ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ–ಮಳೆಯಾಶ್ರಿತ ಪ್ರದೇಶಾಭಿವೇದ್ಧಿ ಯೋಜನೆ(NMSA-RAD) ಕಾರ್ಯಕ್ರಮವನ್ನು 2020–21ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಒಟ್ಟು ರೂ.1500.00 ಲಕ್ಷಗಳ ಕಾರ್ಯಕ್ರಮ ಅನುಮೋದನೆಯಾಗಿರುತ್ತದೆ (ಕೇಂದ್ರದ ಪಾಲು ರೂ.900.00ಲಕ್ಷಗಳು ಹಾಗೂ ರಾಜ್ಯದ ಪಾಲು ರೂ.600.00 ಲಕ್ಷಗಳು). ಇದರಲ್ಲಿ ಕೇಂದ್ರ ಸರ್ಕಾರದಿಂದ ಮೊದಲನೇ ಕಂತಿನಲ್ಲಿ ಒಟ್ಟು ರೂ.335.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಇದಕ್ಕೆ ರಾಜ್ಯದ ಪಾಲಿನ ಅನುದಾನ ರೂ.223.33 ಲಕ್ಷಗಳನ್ನು ಸೇರಿಸಿ, ಒಟ್ಟು ರೂ.558.33 ಲಕ್ಷಗಳನ್ನು ಕೇಂದ್ರ ಸರ್ಕಾರದ ಅನುದಾನ ಬಿಡುಗಡೆ ಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ, ಕೇಂದ್ರ ಸರ್ಕಾರದ ಅನುದಾನ ಬಿಡುಗಡೆ ಆದೇಶ ಪತ್ರದನ್ವಯ ಕೇಂದ್ರದ

ಪಾಲಿನ ಎರಡನೇ ಕಂತಿನ ಅನುದಾನ ಒಟ್ಟು ರೂ.565.00 ಲಕ್ಷಗಳನ್ನು (ಸಾಮಾನ್ಯ ಘಟಕ- ರೂ.285.90 ಲಕ್ಷ; ಪರಿಶಿಷ್ಟ ಜಾತಿ ಉಪಯೋಜನೆ ಘಟಕ- ರೂ.64.40 ಲಕ್ಷ ಮತ್ತು ಗಿರಿಜನ ಉಪಯೋಜನೆ ಘಟಕ- ರೂ.26.37 ಲಕ್ಷ) ಸೇರಿಸಿ ಒಟ್ಟು ರೂ.941.67 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ ರವರು ಕೋರಿದ್ದು, ಅದರನ್ವಯ, ರೂ941.67 ಲಕ್ಷಗಳಿಗೆ ಅನುಗುಣವಾಗಿ, ಪ್ರಸ್ತುತ ಆಯವ್ಯಯದಲ್ಲಿ ರೂ.440.22 ಲಕ್ಷಗಳು ಮಾತ್ರ ಲಭ್ಯವಿದ್ದು (ಉ.ಶೀ. 059 ಅಡಿ ರೂ.7.00 ಲಕ್ಷ ಹೊರತುಪಡಿಸಿ), ಸಮಾನ್ಯ ಘಟಕದಡಿ (ಉ.ಶೀ.106) ರೂ.329.86 ಲಕ್ಷ, ಪರಿಶಿಷ್ಟ ಜಾತಿ ಉಪಯೋಜನೆ ಘಟಕದಡಿ(ಉ.ಶೀ.422) ರೂ.121.59 ಲಕ್ಷ ಮತ್ತು ಗಿರಿಜನ ಉಪಯೋಜನೆ ಘಟಕದಡಿ (ಉ.ಶೀ.423) ರೂ.50.00 ಲಕ್ಷ ಒಟ್ಟಾರೆ ರೂ.501.45 ಲಕ್ಷ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಬೇಕಾಗಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, NMSA-RAD ಕಾರ್ಯಕ್ರಮಕ್ಕೆ 2020-21ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2401-00-108-1-16 ರ ಉಪ ಶೀರ್ಷಿಕೆ:059, 422 ಮತ್ತು 423 ರಡಿ ಪ್ರಸ್ತುತ ಲಭ್ಯವಿರುವ ರೂ.440.22 ಲಕ್ಷಗಳ ಜೊತೆಗೆ ಹೆಚ್ಚುವರಿಯಾಗಿ ರೂ.501.45 ಲಕ್ಷಗಳನ್ನು ಒದಗಿಸಿ, ಒಟ್ಟು ರೂ.941.67 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿ ಸರ್ಕಾರದ ಸೂಕ್ತ ಆದೇಶ ಹೊರಡಿಸುವಂತೆ, ಕೃಷಿ ಆಯುಕ್ತರು ಕೋರಿರುತ್ತಾರೆ.

2020-21ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ(RAD) ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ, ಈಗಾಗಲೇ ಬಿಡುಗಡೆಯಾಗಿರುವ ಅನುದಾನ, ಪ್ರಸ್ತುತ ಆಯವ್ಯಯದಲ್ಲಿ ಲಭ್ಯವಿರುವ ಅನುದಾನ, ಎರಡನೇ ಕಂತಿನಲ್ಲಿ ಬಿಡುಗಡೆಗೆ ಕೋರಲಾಗಿರುವ ಅನುದಾನ ಮತ್ತು ಹೆಚ್ಚುವರಿ ಅಗತ್ಯ ಅನುದಾನದ ವಿವರಗಳು ಈ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

| ಘಟಕ | 2020-21ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಈಗಾಗಲೇ ಬಿಡುಗಡೆಯಾಗಿರುವ ಅನುದಾನ | ಪ್ರಸ್ತುತ ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಎರಡನೇ ಕಂತಿನಲ್ಲಿ ಬಿಡುಗಡೆಗೆ ಕೋರಲಾಗಿರುವ ಅನುದಾನ | ಹೆಚ್ಚುವರಿ ಅಗತ್ಯ ಅನುದಾನ |
|---|---|---|---|---|---|
| ಸಾಮಾನ್ಯ (059) | 7.00 | 0.00 | 7.00 | 0.00 | 7.00 |
| ಸಾಮಾನ್ಯ (106) | 1274.00 | 889.11 | 384.89 | 714.75 | 329.86 |
| ವಿಶೇಷ ಘಟಕ ಯೋಜನೆ (422) | 270.00 | 230.59 | 39.41 | 161.00 | 121.59 |
| ಗಿರಿಜನ ಉಪ ಯೋಜನೆ (423) | 116.00 | 100.08 | 15.92 | 65.92 | 50.00 |
| **ಒಟ್ಟು** | **1667.00** | **1219.78** | **447.22** | **941.67** | **494.45** |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರೀಶಿಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: AGRI-AMS/37/2020, ಬೆಂಗಳೂರು, ದಿನಾಂಕ:26.03.2021.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, 2020–21ನೇ ಸಾಲಿನ ಕೇಂದ್ರ ಪುರಸ್ಕೃತ ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ(RAD) ಯೋಜನೆಯ ಲೆಕ್ಕ ಶೀರ್ಷಿಕೆ: 2401–00–108–1–16 ರಡಿ ಎರಡನೇ ಕಂತಿನ ಅನುದಾನ (ಕೇಂದ್ರ ಹಾಗೂ ರಾಜ್ಯದ ಪಾಲು ಸೇರಿ) ವಾಗಿ ಲಭ್ಯವಿರುವ **ರೂ.440.22 ಲಕ್ಷಗಳನ್ನು (ನಾಲ್ಕುನೂರ ನಲವತ್ತು ಲಕ್ಷದ ಇಪ್ಪತ್ತೆರಡು ಸಾವಿರ ರೂಪಾಯಿಗಳು ಮಾತ್ರ)** ಈ ಕೆಳಕಂಡಂತೆ ವರ್ಗವಾರು ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ವರ್ಗ/ಉಪ ಶೀರ್ಷಿಕೆ | ಕೇಂದ್ರದ ಪಾಲಿನ ಅನುದಾನ (60%) | ರಾಜ್ಯದ ಪಾಲಿನ ಅನುದಾನ (40%) | ಒಟ್ಟು ಮೊತ್ತ |
|---|---|---|---|
| ಸಹಾಯಧನ–ಸಾಮಾನ್ಯ (106) | 230.934 | 153.956 | **384.89** |
| ಪರಿಶಿಷ್ಟ ಜಾತಿ ಉಪ ಯೋಜನೆ (422) | 23.646 | 15.764 | **39.41** |
| ಗಿರಿಜನ ಉಪ ಯೋಜನೆ (423) | 9.552 | 6.368 | **15.92** |
| **ಒಟ್ಟು** | **264.132** | **176.088** | **440.22** |

ಕೃಷಿ ನಿರ್ದೇಶಕರು / ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೇಂದ್ರ ಸರ್ಕಾರವು "Rainfed Area Development" ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್.ಡಿ 04 ಟಿ.ಎಫ್.ಪಿ 2020, ದಿನಾಂಕ:24.11.2020 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

P. Satya 26/3/2021

(ಪಿ. ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ:–

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)/ (ಇ& ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು–01.

2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
7. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
8. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ನಿರ್ದೇಶಕರು, TNMC, ಖನಿಜ ಭವನ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ – 4&5), ಆರ್ಥಿಕ ಇಲಾಖೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.